ನಿಮ್ಮೊಡನೆ

# ವಕೀಲರ ಶುಲ್ಕ ನಿಯಂತ್ರಿಸಬಹುದೆ?

ವಕೀಲರ ಶುಲ್ಕವನ್ನು ಕಾನೂನಿನ ಚೌಕಟ್ಟಿಗೆ ಒಳಪಟ್ಟು ನಿಯಂತ್ರಿಸಬೇಕು ಎಂದು ಇತ್ತೀಚೆಗೆ ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದೆ. ಇಂತಹ ನಿಯಂತ್ರಣದ ಅಗತ್ಯವಿದೆ ಎಂದು ಕಾನೂನು ಆಯೋಗ ಈ ಹಿಂದೆಯೇ ಅಭಿಪ್ರಾಯಪಟ್ಟಿತ್ತು. ನ್ಯಾಯದಾನದ ಪ್ರಕ್ರಿಯೆಯಲ್ಲಿ ಎಲ್ಲ ಜನರಿಗೂ ಅತ್ಯುತ್ತಮ ವಕೀಲರ ಸೇವೆ ಲಭ್ಯವಾಗಬೇಕು ಎನ್ನುವುದು ಇದರ ಹಿಂದಿನ ಆಶಯ.

‘ಇಬ್ಬರು ವಕೀಲರ ನಡುವೆ ಸಿಕ್ಕಿಬಿದ್ದ ಕಕ್ಷಿದಾರ, ಎರಡು ನಾಯಿಗಳ ಕೈಗೆ ಸಿಕ್ಕಿದ ಮೀನಿನಂತೆ’ ಎನ್ನುವ ಮಾತೊಂದು ಚೀನಾದಲ್ಲಿ ಪ್ರಚಲಿತದಲ್ಲಿದೆ. ಇದು ವಕೀಲರ ಕಾರ್ಯವೈಖರಿಯ ಬಗ್ಗೆ ಇರುವ ಮಾತು. ನಮ್ಮಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಿಲ್ಲ. ಎಂದೂ ಮುಗಿಯದ ಕೇಸುಗಳ ಬೆನ್ನು ಹತ್ತಿ ಲಕ್ಷಾಂತರ ಕಕ್ಷಿದಾರರು ಕೋರ್ಟ್‌ಗಳ ಮುಂದೆ ಕಾಲಯಾಪನೆ ಮಾಡುವ ದೃಶ್ಯ ನಮ್ಮಲ್ಲಿ ಸಾಮಾನ್ಯ. ಈ ಮಧ್ಯೆ ವಕೀಲರ ಶುಲ್ಕ ಕೂಡಾ ಗಗನಕ್ಕೇರಿದೆ. ಕೆಳಮಟ್ಟದ ನ್ಯಾಯಾಲಯದಲ್ಲೇ ಸಾಮಾನ್ಯ ಪ್ರಕರಣವೊಂದಕ್ಕೆ ಕಕ್ಷಿದಾರ ಪ್ರತಿ ಭೇಟಿಗೂ 500ರಿಂದ ಸಾವಿರ ರೂಪಾಯಿ ವಕೀಲರಿಗೆ ನೀಡಬೇಕು. ಪ್ರಕರಣದಲ್ಲಿ ಜಯ ಸಿಗುತ್ತದೆ ಎನ್ನುವುದು ಖಾತ್ರಿಯಿಲ್ಲ. ಸಿವಿಲ್ ವ್ಯಾಜ್ಯವಾದರೆ ಹೆಚ್ಚಿನ ವಕೀಲರು ಕೇಸು ಗೆದ್ದ ಬಳಿಕ ಸಿಗುವ ಪರಿಹಾರದ ಹಣದಲ್ಲಿ ಶೇಕಡಾ 20ರಷ್ಟನ್ನು ಫೀಸ್ ರೂಪದಲ್ಲಿ ತೆಗೆದುಕೊಳ್ಳುತ್ತಾರೆ. ಇಂತಹ ಮೊಕದ್ದಮೆಗಳಲ್ಲಿ ಜಯ ಸಿಗದಿದ್ದರೂ ಕಾಗದಪತ್ರ, ಪ್ರಯಾಣ ವೆಚ್ಚ, ದಸ್ತಾವೇಜುಗಳ ಸಲುವಾಗಿ ಕಕ್ಷಿದಾರನೇ ಸಾಕಷ್ಟು ಹಣ ಖರ್ಚು ಮಾಡಿರುತ್ತಾನೆ. ಮೇಲಿನ ಕೋರ್ಟ್‌ಗಳಿಗೆ ಹೋದಂತೆ ಶುಲ್ಕ ಹೆಚ್ಚುತ್ತಾ ಹೋಗುತ್ತದೆ. ರಾಜ್ಯದ ಹೈಕೋರ್ಟ್‌ನಲ್ಲಿ ಒಬ್ಬ ಕಕ್ಷಿದಾರನ ಪರವಾಗಿ ಒಮ್ಮೆ ಕೋರ್ಟಿಗೆ ಹಾಜರಾದರೆ 5–6 ಲಕ್ಷ ರೂಪಾಯಿ ಶುಲ್ಕ ಪಡೆಯುವ ವಕೀಲರೂ ಇದ್ದಾರೆ. ಸುಪ್ರೀಂ ಕೋರ್ಟ್‌ನ ಕಥೆ ಹೇಳುವುದೇ ಬೇಡ. ಅಲ್ಲಿ ಏನಿದ್ದರೂ ಕೋಟಿಗಳ ಲೆಕ್ಕದಲ್ಲಿ ಶುಲ್ಕ ಪಡೆಯುವವರು ಇದ್ದಾರೆ. ಇಂತಹ ಬಹುತೇಕ ಪ್ರಕರಣಗಳಲ್ಲಿ ಹಣ ಚೆಕ್‌ಗಳ ಮೂಲಕ ಪಾವತಿ ಆಗುವುದೂ ಇಲ್ಲ.

ವಕೀಲರ ಶುಲ್ಕವನ್ನು ಕಾನೂನಿನ ಚೌಕಟ್ಟಿಗೆ ಒಳಪಟ್ಟು ನಿಯಂತ್ರಿಸಬೇಕು ಎಂದು ಇತ್ತೀಚೆಗೆ ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದೆ. ಇಂತಹ ನಿಯಂತ್ರಣದ ಅಗತ್ಯವಿದೆ ಎಂದು ಕಾನೂನು ಆಯೋಗ ಈ ಹಿಂದೆಯೇ ಅಭಿಪ್ರಾಯಪಟ್ಟಿತ್ತು. ನ್ಯಾಯದಾನದ ಪ್ರಕ್ರಿಯೆಯಲ್ಲಿ ಎಲ್ಲ ಜನರಿಗೂ ಅತ್ಯುತ್ತಮ ವಕೀಲರ ಸೇವೆ ಲಭ್ಯವಾಗಬೇಕು ಎನ್ನುವುದು ಇದರ ಹಿಂದಿನ ಆಶಯ. ಆದರೆ ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಸಾಧ್ಯತೆ ಕಂಡುಬರುತ್ತಿಲ್ಲ. ಅಕಸ್ಮಾತ್ ಸರ್ಕಾರ ಕ್ರಮ ಕೈಗೊಂಡು ಕಾನೂನು ತಂದರೂ ಅದರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಮೊರೆಹೋಗಿ ಅದನ್ನು ರದ್ದುಗೊಳಿಸುವಷ್ಟು ಚಾಣಾಕ್ಷ ವಕೀಲರು ನಮ್ಮಲ್ಲಿ ಹೇರಳವಾಗಿದ್ದಾರೆ.

ವಕೀಲರು ಮಾತ್ರವಲ್ಲ, ವೈದ್ಯರು, ಲೆಕ್ಕ ಪರಿಶೋಧಕರು, ಮ್ಯಾನೇಜ್‌ಮೆಂಟ್ ತಜ್ಞರು–ಇವರ ಯಾರ ಶುಲ್ಕವೂ ಯಾವ ಕಾನೂನಿನ ನಿಯಂತ್ರಣಕ್ಕೂ ಸಿಗುವುದಿಲ್ಲ. ಇತ್ತೀಚೆಗೆ ನಡೆದ ಆದಾಯ ತೆರಿಗೆ ದಾಳಿಯಲ್ಲಿ ಬೆಂಗಳೂರಿನ ಪ್ರಸಿದ್ಧ ವೈದ್ಯರೊಬ್ಬರ ಬಳಿ ಕೋಟಿಗಟ್ಟಳೆ ಕಮೀಶನ್ ಪಡೆದ ದಾಖಲೆಗಳನ್ನು ಲಭ್ಯವಾದದ್ದು ಇಲ್ಲಿ ನೆನಪಾಗುತ್ತದೆ. ಖ್ಯಾತ ವಕೀಲರ ಮನೆಗಳ, ಕಚೇರಿಗಳ ಮೇಲೆ ತೆರಿಗೆ ದಾಳಿ ನಡೆದರೂ ಇದೇ ರೀತಿಯ ಪ್ರಕರಣಗಳು ಬಯಲಿಗೆ ಬರಬಹುದು. ಆದರೆ ವೈದ್ಯರ ಮೇಲೆ ದಾಳಿ ನಡೆಸಿದಷ್ಟು ಸುಲಭವಾಗಿ ವಕೀಲರ ಮನೆಗಳ ಮೇಲೆ ದಾಳಿ ನಡೆಯುವುದು ಸಾಧ್ಯವಿಲ್ಲ. ‘ಯಾರನ್ನೂ ನಾವು ನಮ್ಮ ಬಳಿಗೇ ಬನ್ನಿ ಎಂದು ಕರೆಯುವುದಿಲ್ಲ. ಯಾರಿಗೆ ಅತ್ಯುತ್ತಮ ವಕೀಲ ಸೇವೆಯ ಅಗತ್ಯವಿದೆಯೋ ಅವರು ನಮ್ಮ ಬಳಿ ಬರುತ್ತಾರೆ’ ಎಂದು ಖ್ಯಾತ ವಕೀಲರೊಬ್ಬರು ಹೇಳಿದರು. ಅವರ ಮಾತೂ ನಿಜವೇ.

ವಕೀಲರ ಶುಲ್ಕವನ್ನು ನಿಯಂತ್ರಿಸುವುದಾದರೆ ಹೇಗೆ ಮಾಡಬಹುದು? ಸರಕಾರಿ ಆಸ್ಪತ್ರೆಗಳು ಇದ್ದ ಹಾಗೆ ಸರ್ಕಾರವೇ ವಕೀಲರ ಕ್ಲಿನಿಕ್‌ಗಳನ್ನು ಸ್ಥಾಪಿಸಿ ಅಲ್ಲಿ ಸಾಕಷ್ಟು ವಕೀಲರ ಸೇವೆ ಸಿಗುವಂತೆ ಮಾಡಬಹುದೆ? ಇಂತಹ ವ್ಯವಸ್ಥೆಗೆ ಸಣ್ಣ ಪುಟ್ಟ ವಕೀಲರು ಒಪ್ಪಿದರೂ ದೊಡ್ಡ ವಕೀಲರು ಒಪ್ಪುವ ಸಾಧ್ಯತೆ ಇಲ್ಲ. ಸುಪ್ರೀಂಕೋರ್ಟ್ 2013ರಲ್ಲೇ ರೂಪಿಸಿದ ನಿಯಮಗಳ ಪ್ರಕಾರ, ವಕೀಲರೊಬ್ಬರು ಒಮ್ಮೆ ವಿಚಾರಣೆಗೆ ಹಾಜರಾದರೆ ಗರಿಷ್ಟ 8000 ರೂಪಾಯಿ ಶುಲ್ಕ ಮಾತ್ರ ಪಡೆಯಬೇಕು. ಆದರೆ ಆ ನಿಯಮವನ್ನು ಯಾರೂ ಪಾಲಿಸುತ್ತಲೂ ಇಲ್ಲ; ಅದರ ಬಗ್ಗೆ ಕಕ್ಷಿದಾರರಿಗೆ ಮಾಹಿತಿಯೂ ಇಲ್ಲ.

ನ್ಯಾಯಾಂಗ ಸೇವೆ ಎಲ್ಲರಿಗೂ ಸುಲಭದರದಲ್ಲಿ ಲಭ್ಯವಾಗಬೇಕು ಎನ್ನುವುದು ಒಂದು ಸಾಮಾಜಿಕ ಆಶಯ. ಇದು ಸಾಧ್ಯವಾಗಬೇಕೆಂದರೆ ವಕೀಲರೇ ಮನಸ್ಸು ಮಾಡಬೇಕು. ಈಗಿರುವ ಸಾಂವಿಧಾನಿಕ ವ್ಯವಸ್ಥೆಯಲ್ಲಿ ಸರ್ಕಾರದ ಕಾನೂನುಗಳಿಂದ ಸಾಧ್ಯವಾಗುವ ಮಾತಲ್ಲ ಇದು.

■ ಬಿ.ಎಂ.ಹನೀಫ್



ಈಶ್ವರ್